ಅಸಲು ದಾವಾ 162/2020
ಡಿ.ಡಬ್ಲ್ಯು : 1

<u>ದಿನಾಂಕ **22.08.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.</u>

<u>ಪಾಟೀ ಸವಾಲು : ವಾದಿ ಪರವಾಗಿ ಶ್ರೀ ಸಿ.ಎಂ. ವಕೀಲರಿಂದ</u>

ನಾನು ವಿಜಯ್ ಕುಮಾರ್ ಎಂಬುವವರಿಂದ ಖರೀದಿ ಮಾಡಿರುತ್ತೇನೆ. ಖರೀದಿ ಮಾಡುವ ಮೊದಲು ನಾನು ಸರ್ವೇ ಮಾಡಿಸಿರುತ್ತೇನೆ. ನಾನು ಖಾಸಗಿಯಾಗಿ ಸರ್ವೇ ಮಾಡಿಸಿದ್ದು, ಅದರ ವರದಿಯನ್ನು ಸಲ್ಲಿಸಲು ಸಾಧ್ಯವಿಲ್ಲ.

ಜಮೀನನ್ನು ಖರೀದಿ ಮಾಡುವ ಮುನ್ನ ಸರ್ಕಾರಿ ಸರ್ವೇಯರ್ ರವರಿಂದ ಸರ್ವೇ ಮಾಡಿಸಲು ನನಗೆ ಸಮಯ ಇರಲಿಲ್ಲ. ನಾನು ವ್ಯವಹಾರಸ್ಥನಾದ್ದರಿಂದ ಸರ್ಕಾರಿ ಸರ್ವೇಯರ್ ರವರಿಂದ ಅಳತೆ ಮಾಡಿಸುವಷ್ಟು ಸಮಯ ಇರಲಿಲ್ಲ.

ನೀವು ಜಮೀನು ಖರೀದಿ ಮಾಡುವ ಮೊದಲು ಯಾವ ಯಾವ ದಾಖಲೆಗಳನ್ನು ಪರಿಶೀಲನೆ ಮಾಡಿದ್ದೀರಾ ಎಂದರೆ, ಸಾಕ್ಷಿಯು ಸದರಿ ವಿಜಯ್ ಕುಮಾರ್ ರವರ ಪಿತ್ರಾರ್ಜಿತ ಆಸ್ತಿ ಎಂದು ನುಡಿಯುತ್ತಾರೆ.

ನಿಮ್ಮ ಪ್ರತಿವಾದಪತ್ರದಲ್ಲಿ ಜಮೀನು ಗೇಣಿ ಆಧಾರದ ಮೇಲೆ ಸರ್ಕಾರದಿಂದ ವೀರಮಲ್ಲಯ್ಯ ಬಿನ್ ಚನ್ನಯ್ಯರವರಿಗೆ ಮಂಜೂರು ಆಯಿತು ಎಂದು ಹೇಳಿಕೊಂಡಿದ್ದು, ಅದಕ್ಕೆ ಸಂಬಂಧಪಟ್ಟ ಮಂಜೂರಾತಿ ಪತ್ರವನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ.

ನಿಮ್ಮ ತಕರಾರಿನಲ್ಲಿ ನೀವು ವಿಜಯ್ ಕುಮಾರ್ ಮತ್ತು ಇನ್ನೊಬ್ಬರಿಗೆ ಅಸಲು ದಾವೆ 215/2008 ನಡೆಯುತ್ತಿತ್ತು ಎಂದು ಹೇಳಿದ್ದೀರಿ ಎಂದರೆ, ಸಾಕ್ಷಿಯು ಅದು ಯಾವುದು ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ವಿಜಯ್ ಕುಮಾರ್ ಮತ್ತು ಅವರ ಅಕ್ಕ-ತಂಗಿಯರ ನಡುವೆ ಕೇಸು ನಡೆಯುತ್ತಿತ್ತು, ಸದರಿ ಕೇಸು ಮುಗಿದ ನಂತರ ನಾನು ಖರೀದಿ ಮಾಡಿರುತ್ತೇನೆ.

ಅಸಲು ದಾವೆ 215/2008 ರಲ್ಲಿ ಪ್ರಸ್ತುತ ದಾವೆಯ ವಾದಿಯು ಪಕ್ಷಗಾರರಲ್ಲ ಎಂದರೆ, ಸಾಕ್ಷಿಯು ಅವರಿಗೂ ಇದಕ್ಕೂ ಸಂಬಂಧವಿಲ್ಲ ಎಂದು ನುಡಿಯುತ್ತಾರೆ. ನೀವು ಜಮೀನಿಗೆ ಸಂಬಂಧಿಸಿದಂತೆ ಋಣಭಾರ ಪತ್ರವನ್ನು ಯಾವ ವರ್ಷಗಳಿಗೆ ಸಂಬಂಧಪಟ್ಟಂತೆ ತೆಗೆದುಕೊಂಡಿದ್ದೀರಾ ಎಂದರೆ, ಸಾಕ್ಷಿಯು ಅವರಿಗೆ ಮಂಜೂರಾದಾಗಿನಿಂದ ಖರೀದಿ ಮಾಡುವವರೆಗಿನ ಋಣಭಾರ ಪತ್ರವನ್ನು ಪಡೆದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ.

ಯಾವ ವರ್ಷದಲ್ಲಿ ಮಂಜೂರಾಗಿರುತ್ತದೆ ಎಂದರೆ, ಸಾಕ್ಷಿಯು ನನಗೆ ನೆನಪಿಲ್ಲ ಮರೆತುಹೋಗಿದೆ ಎಂದು ನುಡಿಯುತ್ತಾರೆ.

ದಿನಾಂಕ 23.06.1970 ರಲ್ಲಿ ವಾದಿ ಮತ್ತು ಆಕೆಯ ತಾಯಿ ಗಂಗಮ್ಮರವರು ಅನ್ನಪೂರ್ಣಮ್ಮರವರಿಗೆ ದಾವಾ ಸ್ವತ್ತನ್ನು ಮಾರಾಟ ಮಾಡಿರುತ್ತಾರೆ ಎಂದರೆ, ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ತದನಂತರ ದಿನಾಂಕ 09.07.1974 ರಂದು ದಾವಾ ಸ್ವತ್ತನ್ನು ಅನ್ನಪೂರ್ಣಮ್ಮರವರಿಂದ ಪುನಃ ವಾದಿ ಮತ್ತು ಆಕೆಯ ತಾಯಿ ಗಂಗಮ್ಮರವರು ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಿನಾಂಕ 23.06.1970 ಮತ್ತು ದಿನಾಂಕ 09.07.1974 ರ ಎರಡೂ ಕ್ರಯಪತ್ರಗಳಿಗೆ ವಿಜಯ್ ಕುಮಾರ್ ರವರ ತಂದೆ ವೀರಮಲ್ಲೇಗೌಡರವರು ಸಾಕ್ಷಿದಾರರಾಗಿ ಸಹಿ ಹಾಕಿರುತ್ತಾರೆ ಎಂದರೆ, ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ.

ದಾವಾ ಸ್ವತ್ತಿನಲ್ಲಿ ನೀವು ಬೋರ್ವೆಲ್ ಗಳನ್ನು ತೆಗೆಸಿ ಉಳುಮೆ ಮಾಡುತ್ತಿರುವುದಾಗಿ ಸುಳ್ಳು ಬರೆಯಿಸಿರುತ್ತೀರಿ ಎಂದರೆ, ಸಾಕ್ಷಿಯು ಮೊದಲು ವಿಜಯ್ ಕುಮಾರ್ ಸ್ವಾಧೀನಾನುಭವದಲ್ಲಿ ಇದ್ದರು, ತದನಂತರ ನಾನು ಸ್ವಾಧೀನಾನುಭವದಲ್ಲಿ ಇದ್ದು ಬೋರ್ವೆಲ್ ಕೊರೆಯಿಸಿದ್ದೇನೆ ಮತ್ತು ಮನೆ ಕಟ್ಟಿಸಿದ್ದೇನೆ, ದಾಳಿಂಬೆ ಬೆಳೆ ಬೆಳೆಯುತ್ತಿದ್ದೇನೆ ಎಂದು ನುಡಿಯುತ್ತಾರೆ.

ದಾವಾ ಸ್ವತ್ತು ಮೂಲತಃ ಗಂಗಮ್ಮ ಮತ್ತು ವಾದಿಗೆ ಸೇರಿದ್ದು ಎಂದರೆ ಸುಳ್ಳು. ವಿಜಯ್ ಕುಮಾರ್ ರವರಾಗಲೀ ಅಥವಾ ಅವರ ತಂದೆ ವೀರಮಲ್ಲೇಗೌಡರಾಗಲೀ ಯಾವತ್ತೂ ಸಹ ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಈಗಲೂ ಸಹ ವಾದಿಯೇ ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿಯಲ್ಲ.

<u>ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.</u>

ಓದಿ ಹೇಳಿ ಕೇಳಿ ಸರಿ ಇದೆ
ಸಹಿ/-
ಹಿರಿಯ ಶ್ರೇಣಿ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,
ಗೌರಿಬಿದನೂರು.